ದಿಃ 03.07.2023 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು

**ಮುಖ್ಯ ವಿಚಾರಣೆಃ ಶ್ರೀ ಎಸ್.ಡಿ, ವಕೀಲರಿಂದ ಅರ್ಜಿದಾರರ ಪರವಾಗಿ**

1. ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣಪತ್ರದ ಮೂಲಕ ಸಲ್ಲಿಸಿದ್ದು ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ನನಗೆ ತಿಳಿದಿವೆ ಹಾಗೂ ಸತ್ಯವಾಗಿವೆ. ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ.
2. ಪೊಲೀಸ್ ನೋಟೀಸು ನಿ.ಪಿ.1 ಎಂದು ಗುರುತಿಸಲಾಯಿತು, ದೂರಿನ ದೃಢೀಕೃತ ನಕಲನ್ನು ನಿ.ಪಿ.2 ಎಂದು ಗುರುತಿಸಲಾಯಿತು, ಪ್ರಥಮ ವರ್ತಮಾನ ವರದಿಯ ದೃಢೀಕೃತ ನಕಲನ್ನು ನಿ.ಪಿ.3 ಎಂದು ಗುರುತಿಸಲಾಯಿತು, ಮಹಜರ್ ನ ದೃಢೀಕೃತ ನಕಲನ್ನು ನಿ.ಪಿ.4 ಎಂದು ಗುರುತಿಸಲಾಯಿತು, ಸಾಕ್ಷಿದಾರರ ಹೇಳಿಕೆಯ ದೃಢೀಕೃತ ನಕಲನ್ನು ನಿ.ಪಿ.5 ರಿಂದ 9 ಎಂದು ಗುರುತಿಸಲಾಯಿತು, charge sheet ನ ದೃಢೀಕೃತ ನಕಲನ್ನು ನಿ.ಪಿ.10 ಎಂದು ಗುರುತಿಸಲಾಯಿತು, ಗಾಯದ ಪ್ರಮಾಣ ಪತ್ರದ ದೃಢೀಕೃತ ನಕಲನ್ನು ನಿ.ಪಿ.11 ಎಂದು ಗುರುತಿಸಲಾಯಿತು, Discharge summary ಯನ್ನು ನಿ.ಪಿ.12 ಎಂದು ಗುರುತಿಸಲಾಯಿತು, ಮೆಡಿಕಲ್ ಬಿಲ್ಲುಗಳು ನಿ.ಪಿ.13 ರಿಂದ 34 ಎಂದು ಗುರುತಿಸಲಾಯಿತು, ಟ್ರಾವಲ್ಸ್ ಬಿಲ್ಲುಗಳು ನಿ.ಪಿ.35 ರಿಂದ 38 ಎಂದು ಗುರುತಿಸಲಾಯಿತು.

(ಮುಂದುವರೆದ ಮುಖ್ಯ ವಿಚಾರಣೆಗೆ ಕಾಲವಕಾಶ ಕೋರಿದ್ದು, ನೀಡಲಾಯಿತು)

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

**ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,**
**ಮೂಡಿಗೆರೆ.**

ಸಾಕ್ಷಿಯ ಸಹಿ
ಮಾ

ದಿಃ 06.11.2023 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು

**ಮುಂದುವರೆದ ಮುಖ್ಯ ವಿಚಾರಣೆಃ ಶ್ರೀ ಎಂ.ಟಿ.ಎಸ್ ವಕೀಲರಿಂದ ಅರ್ಜಿದಾರರ ಪರವಾಗಿ**

3. ಎ.ಎಂ.ಜಿ.ಹೆಚ್. ಚಿಕ್ಕಮಗಳೂರು ಆಸ್ಪತ್ರೆಯಿಂದ ನೀಡಿದ ಕಾರ್ಡು ನಿ.ಪಿ.39 ಎಂದು ಗುರುತಿಸಲಾಯಿತು, ವೆನಲಾಕ್ ಆಸ್ಪತ್ರೆಯಿಂದ ನೀಡಿದ ಹೊರರೋಗಿ ಕಾರ್ಡು ನಿ.ಪಿ.40 ಎಂದು ಗುರುತಿಸಲಾಯಿತು, Disability ಸರ್ಟಿಫಿಕೇಟ್ ನಿ.ಪಿ.41 ಎಂದು ಗುರುತಿಸಲಾಯಿತು, Discharge summary ನಿ.ಪಿ.42 ಎಂದು ಗುರುತಿಸಲಾಯಿತು, ಎ.ಜೆ ಆಸ್ಪತ್ರೆಯಿಂದ ನೀಡಿದ ಹಣ ಸಂದಾಯ ರಸೀದಿಯನ್ನು ಹಾಜರು ಮಾಡಿದ್ದು ನಿ.ಪಿ.43 ರಿಂದ 47 ಎಂದು ಗುರುತಿಸಲಾಯಿತು, ವಾಹನ ಬಾಡಿಗೆ ಪಡೆದ ಬಗ್ಗೆ ಮತ್ತು ಆಂಬುಲೆನ್ಸ್ ಬಾಡಿಗೆ ನೀಡಿದ ಬಿಲ್ಲನ್ನು ಹಾಜರು ಮಾಡಿದ್ದು ನಿ.ಪಿ.48 ಎಂದ 52 ಎಂದು ಗುರುತಿಸಲಾಯಿತು, ಎ.ಜೆ ಆಸ್ಪತ್ರೆಯಿಂದ ನೀಡಿದ ಹಣ ಸಂದಾಯ ರಸೀದಿ ನಿ.ಪಿ.53 ಎಂದು ಗುರುತಿಸಲಾಯಿತು, ಫೈನಲ್ ಬಿಲ್ಲನ್ನು ಹಾಜರು ಮಾಡಿದ್ದು ನಿ.ಪಿ.54 ಎಂದು ಗುರುತಿಸಲಾಯಿತು, Disability ಸರ್ಟಿಫಿಕೇಟ್ ಬಗ್ಗೆ ರಸೀದಿಯನ್ನು ಹಾಜರು ಮಾಡಿದ್ದು ನಿ.ಪಿ.55 ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಶ್ರೀ ಡಿ.ಎಸ್ ವಕೀಲರಿಂದ 1 ನೇ ಎದುರುದಾರರ ಪರವಾಗಿ**

4. ಪಾಟೀ ಸವಾಲು ಮಾಡಲು ಕಾಲವಕಾಶ ಕೋರಿದ್ದು, ನೀಡಲಾಯಿತು.

**ಪಾಟೀ ಸವಾಲು ಶ್ರೀ ಜೆ.ಪಿ.ಎಲ್ ವಕೀಲರಿಂದ 2 ನೇ ಎದುರುದಾರರ ಪರವಾಗಿ**

5. ಪಾಟೀ ಸವಾಲು ಮಾಡಲು ಕಾಲವಕಾಶ ಕೋರಿದ್ದು, ನೀಡಲಾಯಿತು..

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

**ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,**
**ಮೂಡಿಗೆರೆ.**

ದಿಃ 22.04.2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು

**<u>ಪಾಟೀ ಸವಾಲು ಶ್ರೀ ಎನ್.ಸಿ. ವಕೀಲರಿಂದ ಶ್ರೀ ಡಿ.ಎಸ್ ವಕೀಲರು 1 ನೇ ಎದುರುದಾರರ ಪರವಾಗಿ</u>**

6. ನನ್ನ ಮನೆಯಲ್ಲಿ ನನ್ನ ತಾಯಿ ಮತ್ತು ಹೆಂಡತಿ ಮತ್ತು ನನ್ನ ಎರಡು ಗಂಡು ಮಕ್ಕಳು ಜೊತೆಗೆ ವಾಸವಾಗಿರುತ್ತೇವೆ. ನನ್ನ ಪತ್ನಿಯು ಯಾವುದೇ ಉದ್ಯೋಗವನ್ನು ಹೊಂದಿರುವುದಿಲ್ಲ, ಗೃಹಿಣಿಯಾಗಿರುತ್ತಾಳೆ. ನನ್ನ ಪತ್ನಿಯೇ ನನ್ನ ಅಂಗಡಿಯ ವ್ಯವಹಾರವನ್ನು ನೋಡಿಕೊಳ್ಳುತ್ತಾರೆ ಎಂದರೆ ಸರಿಯಲ್ಲ. ನಾನು ಇಲ್ಲದೆ ಇರುವ ಸಮಯದಲ್ಲಿ ನನ್ನ ಅಂಗಡಿಯನ್ನು ಬೀಗ ಹಾಕುತ್ತೇನೆ. ನನ್ನ ಅಂಗಡಿ ಮತ್ತು ಮನೆ ಒಂದಕ್ಕೊಂದು ತಾಗಿಕೊಂಡಿರುತ್ತದೆ ಎಂದರೆ ಸರಿಯಲ್ಲ. ನಾನು ಅಪಘಾತದ ದಿನ ಚಿಕ್ಕಮಗಳೂರಿನಿಂದ ಕಬ್ಬಿಣಸೇತುವೆ ಮೂಲಕ ಮೂಡಿಗೆರೆ ಬರುತ್ತಿದ್ದೆನು. ಜೆ.ಎಂ.ಜೆ ನರ್ಸರಿಯ ಮುಂಭಾಗದಲ್ಲಿ ಸದರಿ ಅಪಘಾತವು ಆಗಿರುತ್ತದೆ. ಜೆ.ಎಂ.ಜೆ ನರ್ಸರಿ ಪ್ರದೇಶವು ಆಲ್ದೂರು ಠಾಣಾ ವ್ಯಾಪ್ತಿಗೆ ಒಳಪಟ್ಟಿರುತ್ತದೆ ಎಂದರೆ ಸರಿ. ಅಂಗಡಿಯನ್ನು ಹೊರತುಪಡಿಸಿ ನನಗ ಬೇರೆ ಯಾವುದೇ ಆದಾಯ ಇರುವುದಿಲ್ಲ. ಅಪಘಾತದಲ್ಲಿ ನನ್ನ ಎಡಕಾಲಿಗೆ ತೀವ್ರ ಸ್ವರೂಪದ ಗಾಯವಾಗಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಈ ದಿನ ನ್ಯಾಯಾಲಯಕ್ಕೆ ನನ್ನ ಮಾವನ ಕಾರಿನಲ್ಲಿ ಬಂದಿರುತ್ತೇನೆ. ಈಗ ನನ್ನ ಬಳಿ ಆಲ್ಟೋ ಕಾರು ಹಾಗೂ ದ್ವಿಚಕ್ರ ವಾಹನ ಇರುತ್ತದೆ. ಸದರಿ ದ್ವಿಚಕ್ರ ವಾಹನವನ್ನು ನಾನೇ ಚಾಲನೆ ಮಾಡುತ್ತೇನೆ ಎಂದರೆ ಸರಿ. ಅಪಘಾತದಿಂದ ತೀವ್ರ ಸ್ವರೂಪದ ಗಾಯವಾಗಿದ್ದರೆ ದ್ವಿಚಕ್ರ ವಾಹನ ಚಾಲನೆ ಮಾಡಲು ಸಾಧ್ಯವಿರುವುದಿಲ್ಲ ಎಂದರೆ ಸಾಕ್ಷಿಯು ನನ್ನ ಕಾಲಿಗೆ ರಾಡ್ ಅಳವಡಿಸಿದ್ದು ಈಗ ತೆಗೆದಿರುತ್ತಾರೆ ಎಂದು ನುಡಿಯುತ್ತಾರೆ, ಸಾಕ್ಷಿಯು ಮುಂದುವರೆದು ಇನ್ನು ಒಂದು ಶಸ್ತ್ರ ಚಿಕಿತ್ಸೆ ಬಾಕಿ ಇರುತ್ತದೆ ಎಂದು ನುಡಿಯುತ್ತಾರೆ. ಅಪಘಾತದ

ದಿನ ನಾನು ಮತ್ತು ನನ್ನ ತಂದೆಯ ತಂಗಿ ಗಂಡ ದ್ವಿಚಕ್ರ ವಾಹನದಲ್ಲಿ ಪ್ರಯಾಣಿಸುತ್ತಿದ್ದೆವು. ಸದರಿ ದ್ವಿಚಕ್ರ ವಾಹನವು ನನ್ನ ಪತ್ನಿಯ ತಂದೆಗೆ ಸೇರಿರುತ್ತದೆ. ನಾನು ಸದರಿ ಅಪಘಾತದ ಸಲುವಾಗಿ ವಿಮಾ ಪರಿಹಾರವನ್ನು ಪಡೆದಿರುತ್ತೇನೆ ಎಂದರೆ ಸರಿಯಲ್ಲ. ಸದರಿ ದ್ವಿಚಕ್ರ ವಾಹನದ ವಿಮಾ ಪಾಲಿಸಿಯನ್ನು ನೀಡಿರುವ ಸಂಸ್ಥೆಯು ಈ ಪ್ರಕರಣದಲ್ಲಿ ಪಾರ್ಟಿಯಾಗಿದ್ದರು ಸಹ ಉದ್ದೇಶ ಪೂರ್ವಕವಾಗಿ ದ್ವಿಚಕ್ರ ವಾಹನದ ವಿಮಾ ಕಂಪನಿಯನ್ನು ಈ ಪ್ರಕರಣದಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಕಬ್ಬಿಣ ಸೇತುವೆಯ ಬಳಿ ರಸ್ತೆಯು ನೇರವಾಗಿರುವುದರಿಂದ ಹೆಚ್ಚಿನ ವಾಹನಗಳು ಅತಿ ವೇಗದಲ್ಲಿ ಬರುತ್ತವೆ ಎಂದರೆ ಸರಿ. ಸದರಿ ದಿನ ನಾನೇ ಅತಿವೇಗ ಮತ್ತು ಅಜಾಗರುಕತೆಯಿಂದ ದ್ವಿಚಕ್ರ ವಾಹನವನ್ನು ಚಲಾಯಿಸಿ ಅಪಘಾತ ಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಸದರಿ ದಿನ ಹೆಲ್ಮೇಟ್ ಧರಿಸಿರಲಿಲ್ಲ ಎಂದರೆ ಸರಿಯಲ್ಲ. ಸದರಿ ಅಪಘಾತವು ನನ್ನ ತಪ್ಪಿನಿಂದಲೇ ಆಗಿರುವುದರಿಂದ ನಾನು ಈ ಪ್ರಕರಣದಲ್ಲಿ ಕೇಳಿದಂತೆ ಯಾವುದೇ ಪರಿಹಾರವನ್ನು ಪಡೆಯಲು ಅರ್ಹನಲ್ಲ ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ಹಾಜರು ಮಾಡಿರುವ ಎಲ್ಲಾ ದಾಖಲಾತಿಗಳನ್ನು ನಾನು ಸೃಷ್ಟಿ ಮಾಡಿ ಹಾಕಿರುತ್ತೇನೆ ಎಂದರೆ ಸರಿಯಲ್ಲ. ಅಪಘಾತವು ದ್ವಿಚಕ್ರ ವಾಹನವು ಮತ್ತು ಕಾರಿನ ಮಧ್ಯ ಆಗಿರುವುದರಿಂದ ಸದರಿ ಕಾರು ದೊಡ್ಡ ವಾಹನ ಆಗಿರುವುದರಿಂದ ನಾನು ಪೊಲೀಸರ ಜೊತೆ ಶಾಮೀಲ್ ಆಗಿ ಕಾರಿನ ವಿರುದ್ದ ಪ್ರಕರಣ ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ. ಅಪಘಾತದಿಂದಾಗಿ ನನಗೆ ಒಟ್ಟು 4 ಲಕ್ಷ ರೂಪಾಯಿ ಖರ್ಚು ಆಗಿರುತ್ತದೆ ಎನ್ನುವ ಬಗ್ಗೆ ನಾನು ಯಾವುದೇ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ನ್ಯಾಯಾಲಯಕ್ಕೆ ಹಾಜರು ಮಾಡಿರುವ ಬಿಲ್ಲುಗಳನ್ನು ಹೊರತುಪಡಿಸಿ ಬೇರೆ ಯಾವುದೇ ಪರಿಹಾರವನ್ನು ಪಡೆಯಲು ಅರ್ಹನಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯ

ಪ್ರಮಾಣ ಪತ್ರವನ್ನು ಸಲ್ಲಿಸಲು ನಾನು ಮತ್ತು ನನ್ನ ತಂದೆ ಮಾಹಿತಿಯನ್ನು ನನ್ನ ವಕೀಲರಿಗೆ ನೀಡಿರುತ್ತೇವೆ. ನನಗೆ ಅಂಗಡಿ ವ್ಯಾಪಾರದಲ್ಲಿ 40 ಸಾವಿರ ರೂಪಾಯಿ ತಿಂಗಳಿಗೆ ಸಂಪಾದನೆ ಇರುತ್ತದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

7. ದಿಃ 01.12.2019 ರಿಂದ ದಿಃ 01.01.2020 ರವರೆಗೆ ನಾನ ಒಳರೋಗಿಯಾಗಿ ಆಸ್ಪತ್ರೆಯಲ್ಲಿ ದಾಖಲಾಗಿರುತ್ತೇನೆ. ನನ್ನ ಮುಖ್ಯ ವಿಚಾರಣೆಯಲ್ಲಿ ದಿಃ 02.12.2019 ರಿಂದ ದಿಃ 23.12.2019 ರವರೆಗೆ ಒಳರೋಗಿಯಾಗಿ ದಾಖಲಾಗಿರುತ್ತೇನೆ ಎಂದು ಸುಳ್ಳು ಹೇಳಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಅಪಘಾತವು ನನ್ನ ತಪ್ಪಿನಿಂದಲೇ ಆಗಿರುವುದರಿಂದ 15 ಲಕ್ಷ ರೂಪಾಯಿ ಪಡೆಯಲು ಅರ್ಹನಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಎಲ್ಲಾ ವಿಚಾರಗಳು ಸತ್ಯಕ್ಕೆ ದೂರವಾಗಿವೆ ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ಹಾಜರು ಮಾಡಿರುವ ಮೆಡಿಕಲ್ ಬಿಲ್ಲುಗಳಿಗೂ ಈ ಪ್ರಕರಣಕ್ಕೂ ಒಂದಕ್ಕೊಂದು ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ.

**ಪಾಟೀ ಸವಾಲು ಶ್ರೀ ಜೆ.ಪಿ.ಎಲ್ ವಕೀಲರಿಂದ 2 ನೇ ಎದುರುದಾರರ ಪರವಾಗಿ**

8. ಅಪಘಾತದಲ್ಲಿ ಭಾಗಿಯಾದ ಕಾರು ಸಂಖ್ಯೆ ಕೆ.ಎ.05/ಎಂ.ಕೆ.4626 ಕ್ಕೆ ಯಾವುದೇ ವಿಮಾ ಸೌಲಭ್ಯ ಇರದೇ ಇರುವುದರಿಂದ 2 ನೇ ಎದುರುದಾರರು ಯಾವುದೇ ಪರಿಹಾರವನ್ನು ನೀಡಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ.

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

**ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,**
**ಮೂಡಿಗೆರೆ.**

ಸಾಕ್ಷಿಯ ಸಹಿ

ಮಾ